

'ನೀವು 'ಅಪರಾಧೀಂತ' ಯಾಕೆ ಕೇಳಿದಿರಿ? ಹಾಗಾದ್ರೆ ನಮ್ಮ ಸಂಶಯ ನಿಜವಾಯಿತು...'

'ಅಪರಾಧಿ ಅನ್ನೋದರಲ್ಲಿ ತಪ್ಪೇನಿದೆ? ಆ ಸಾಕ್ಷಿಯ ನಾಪತ್ತೆಗೆ ಕಾರಣನಾದವನು ಅಪರಾಧೀನೆ ತಾನೆ?'– ಪ್ರೊಫೆಸರ್ ಮೊದಲು ಗೊಂದಲಗೊಂಡಂತೆ ಕಂಡರೂ ತಕ್ಷಣ ಸಾವರಿಸಿಕೊಂಡು ಹೇಳಿದರು. ಕುಲಕರ್ಣಿಯವರ ಮುಖ ಗಂಭೀರವಾಯಿತು.

'ಸರ್... ಇನ್ನೂ ಈ ಕಣ್ಣು ಮುಚ್ಚಾಲೆಯ ಆಟವನ್ನು ನಿಲ್ಲಿಸಿ ನೇರವಾಗಿ ವಿಷಯಕ್ಕೆ ಬರೋಣ...' ಎಂದರು ಕುಲಕರ್ಣಿ.

ಇಳಂಗೋವನ್ ಕನ್ನಡಕದೊಳಗಿನಿಂದಲೇ ಗಂಭೀರವಾಗಿ ಕುಲಕರ್ಣಿಯವರನ್ನು ನೋಡುತ್ತಿದ್ದರು. ಅವರ ಮುಖ ಗಂಟಿಕ್ಕಿತ್ತು.

'ಮೊದಲು ಈ ವಿಡಿಯೊ ನೋಡಿ...' ಕುಲಕರ್ಣಿ, ಸೀನನಿಂದ ಪಡೆದ ವಿಚಾರಣೆಯ ವಿಡಿಯೊ ಹಾಕಿದರು.

ಸೀನ ಹೇಳುತ್ತಿದ್ದ...

'ಸಾಹೇಬ್ರು ಒಂದೊಂದ್ಸಾರಿ ರಾತ್ರೀನೂ ಇಲ್ಲೇ ಉಳ್ಕೋತಾರೆ. ಅವತ್ತು ಭಾನುವಾರ ಬೆಳಗ್ಗೇನೇ ಬೇಗ ಬಂದಿದ್ದೆ. ಮನೆಗೆ ಹೋಗ್ಬೇಕಿತ್ತು. ಬೇಗ ನನ್ನ ಕೆಲ್ಸ ಮುಗ್ಸಿ ಹೋಗೋಣಾಂತ ಬಂದಿದ್ದೆ. ಮುಖ್ಯ ಬಾಗಿಲು ತೆರೆದಿದ್ರಿಂದ ಸಾಹೇಬ್ರು ಒಳಗೇ ಇರ್ಬೇಕೂಂತ ಅಂದ್ಕೊಂಡು, ಹೆಣಗಳನ್ನು ಹೊರತೆಗೆದು ಆಯಾ ಟೇಬಲ್ ಮೇಲೆ ಹಾಕೋಣಾಂತ ಟ್ಯಾಂಕ್ ಹತ್ರ ಹೋದೆ. ಕಬ್ಬಿಣದ ರಾಡ್‌ನ ತುದಿಯಿಂದ ಎಳೆದು ಹಾಕಿಕೊಳ್ಳುತ್ತಿದ್ದೆ. ಬಾಡಿಗಳು ಸುಲಭವಾಗಿ ಹಗುರವಾಗಿ ಎಳೆದ ಕೂಡಲೆ ಮೇಲೆ ಬಂದು ಬಿಡುತ್ತಿದ್ದವು. ಎರಡು ಮೂರು ಬಾಡಿಗಳನ್ನು ಎಳೆದು ಹೊರಗೆ ಹಾಕಿದ್ಮೇಲೆ ಮತ್ತೊಂದು ತುಂಬಾ ಭಾರವಾಗಿರೋ ತರಹಾ ಅನ್ನಿಸ್ತು... ಎಳೆದು ಬಗ್ಗಿ ನೋಡಿದೆ. ಅದೊಂದು ಹುಡುಗಿಯ ಬೆತ್ತಲೆ ದೇಹವಾಗಿತ್ತು ಸರ್, ಬೋರಲಾಗಿತ್ತು. ಹೆದರಿ ಅಲ್ಲಿಯೇ ಬಿಟ್ಟು ಓಡಿ ಬಂದು ಸಾಯೇಬ್ರಿಗೆ ಹೇಳ್ದೆ... ಅದನ್ನು ನಂಬಲಿಲ್ಲ. 'ಹೋಗೋ... ನೀನು ಕುಡಿದದ್ದು ಜಾಸ್ತಿಯಾಯ್ತು' ಎಂದು ಗದರಿಸಿದರು. ನಾನು ವಾದಿಸಿದೆ. ನನ್ನನ್ನು ಬೈದು ಹೊರಗೆ ಕಳುಹಿಸಿದ್ರು. ಮತ್ತೆ ಸೋಮವಾರ ಬೆಳಗ್ಗೆ ಬಂದು ಸಾಯೇಬ್ರಿಗೆ ತೋರಿಸೋಣಾಂತ ಬಂದೆ. ಆದರೆ ಆ ಹುಡುಗಿ ಹೆಣ ಅಲ್ಲಿರಲಿಲ್ಲ! ನನಗೆ ಗಾಬರಿಯಾಯಿತು. ದೆವ್ವಗಿವ್ವ ಇರಬಹುದಾ ಅಂದ್ಕೊಂಡು ಹೆದರಿದ್ದೆ... ಸಾಹೇಬ್ರು ಅಲ್ಲಿಗೇ ಬಂದು 'ಎಲ್ಲೋ ಆ ಹುಡುಗಿ ಹೆಣಾ? ಕುಡಿದು ಕೆಲಸಕ್ಕೆ ಬಂದ್ರೆ ಹೀಗೆ ಆಗೋದು. ಮೊದ್ಲು ಮದ್ವೆ ಮಾಡ್ಕೋ ಹೋಗು' ಎಂದು ಗದರಿಸಿ ಕಳುಹಿಸಿದರು.'

ಇನ್‌ಸ್ಪೆಕ್ಟರ್ ಕುಲಕರ್ಣಿ ವಿಡಿಯೊ ಸ್ವಿಚ್ ಆಫ್ ಮಾಡುವಂತೆ ಹೇಳಿ, 'ಇದರರ್ಥ ಏನು?' ಎಂದು ಗಂಭೀರವಾಗಿ ಕೇಳಿದರು. ಇಳಂಗೋವನ್ ಅವರ ಬಣ್ಣ ಕಳೆದುಕೊಂಡಿತು. ಆದರೂ ಅವರು, 'ನಮ್ಮ ಡಿಪಾರ್ಟ್‌ಮೆಂಟ್ ಮುಂದೆ ಸ್ವಲ್ಪ ಕತ್ತಲಾದರೂ ಯಾರೂ ಓಡಾಡುವುದಿಲ್ಲ. ಇಲ್ಲಿ ಹೆಣಗಳನ್ನು ಕತ್ತರಿಸ್ತಾರೆ. ದೆವ್ವಗಳು, ಮೋಹಿನಿ ಕಾಟ ಇರುತ್ತದೇಂತ ಹೆದರುತ್ತಾರೆ. ಅವನು ಕುಡಿದಿದ್ದ... ಭ್ರಮೆ ಅಷ್ಟೇ...' ಎಂದರು.

'ನಾವು ಆ ಹುಡುಗಿ ಅಥವಾ ಸತ್ತೇ ಹೋಗಿದ್ದರೆ ಅವಳ ಬಾಡಿ ಸಿಗುವತನಕ ಹೀಗೆ, ಅನುಮಾನ ಬಂದ ಕಡೆ ಬರ್ತಾನೇ ಇರ್ತೀವಿ... ಅದೇನೂಂತ ಸತ್ಯ ಹೇಳಿ. ನಿಜಕ್ಕೂ ಹೆಣವಾಗಿ ಟ್ಯಾಂಕ್‌ನಲ್ಲಿ ಕಂಡಿದ್ದ